ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕನ್ನಡ ಪ್ರಾಧ್ಯಾಪಕರ ನೇಮಕದಲ್ಲಿ ಹಿಂದಿನಿಂದಲೂ ಅನೂಚಾನವಾಗಿ ನಡೆದು ಬಂದಂತೆ ರೀಡರ್‌ರಾಗಿರತಕ್ಕವರನ್ನು ರೀಡರಾಗಿ, ರೀಡರಾಗಿರತಕ್ಕವರನ್ನು, ಅಸಿಸ್ಟೆಂಟ್ ಪ್ರೊಫೆಸರಾಗಿ, ಅಸಿಸ್ಟೆಂಟು ಪ್ರೊಫೆಸರಾಗಿರತಕ್ಕವರನ್ನು ಪ್ರೊಫೆಸರಾಗಿ ಮಾಡತಕ್ಕ ಕ್ರಮದಲ್ಲಿ ಎಲ್ಲೋ ಒಂದು ಕಡೆ ತಪ್ಪು ಆಗಿ ಈ ರೀತಿ ಆಗಿದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಹಾಗೇನು ಇಲ್ಲ. ಅದಕ್ಕೆಲ್ಲಾ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ನಿಯಮಗಳನ್ನು ಮಾಡಿದ್ದೇವೆ. ಆ ಪ್ರಕಾರ ಪ್ರಮೋಷನ್ ಅನ್ನು ಸೀನಿಯಾರಿಟಿ ಕಂ ಮೆರಿಟ್ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಕಾಲೇಜು ಮಟ್ಟದಲ್ಲಿ ತರುವುದಕ್ಕೆ ಯೂನಿವರ್ಸಿಟಿಯಲ್ಲಿರತಕ್ಕ ಸಿಂಡಿಕೇಟ್ ಅಡ್ಡಿಯಾಗಿದೆಯೇ, ವಿದ್ಯಾರ್ಥಿಗಳ ತಂದೆ ತಾಯಿಗಳು ಅಡ್ಡಿಯಾಗಿದ್ದಾರೆಯೇ ಅಥವಾ ಮತ್ತೆ ಯಾರು ಇದಕ್ಕೆ ಅಡ್ಡಿಯಾಗಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ತಂದೆ ತಾಯಿಗಳೂ ಅಡ್ಡಿ ಇಲ್ಲ, ಸರ್ಕಾರದವರೂ ಅಡ್ಡಿಯಾಗಿಲ್ಲ, ಯೂನಿವರ್ಸಿಟಿಯವರು ಅದನ್ನು ಇನ್ನೂ ಮಾಡಿಲ್ಲ. ಅವರು ಅದನ್ನು ಮಾಡಬೇಕಾಗಿದೆ.

Mr. SPEAKER.—Question No. 181. The Hon'ble Member is not present. I put the question.

Domiciliary T. B. Treatment.

*Q.—181. Sri S. RUDRAPPA (Kalgi).—

Will the Government be pleased to state :—

whether it is a fact that Government have selected some district for domiciliary T. B. treatment this year ?

A.—Sri K. NAGAPPA ALVA (Minister for Health).—

Yes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಪ್ರಶ್ನೆಯಲ್ಲಿ ವೈದ್ಯರು ಪಾನದ ಮನೆಗಳಲ್ಲಿಯೇ ಕ್ಷಯರೋಗ ಚಿಕಿತ್ಸೆಯನ್ನು ನಡೆಸುವುದಕ್ಕೋಸ್ಕರ ಈ ವರ್ಷ ಸರ್ಕಾರದವರು ಕೆಲವು ಜಿಲ್ಲೆಗಳನ್ನು ಆರಿಸಿರುವುದು ನಿಜವೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಯಾವ ಯಾವ ಜಿಲ್ಲೆಗಳನ್ನು ಆರಿಸಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವರ್ಷಕ್ಕೆ ಕಾರವಾರ ಮತ್ತು ಮೈಸೂರು ಜಿಲ್ಲೆಗಳನ್ನು ನಾವು ಆರಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೆ ಆ ಎರಡು ಜಿಲ್ಲೆಗಳಲ್ಲಿ ಎಷ್ಟು ಜನಗಳಿಗೆ ಆ ಸೌಲಭ್ಯ ದೊರೆತಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಅವು ಪ್ರಾರಂಭವಾಗಿವೆ ಅಷ್ಟೆ.

SHORT NOTICE QUESTION AND ANSWER.

Supply of Electricity to Madras, Kerala and Andhra.

*Q.—3. Sri S. GOPALA GOWDA (Thirthahalli).—

Will the Government be pleased to state :—

(*a*) whether it is a fact that they have agreed to supply Electricity to Madras, Kerala and Andhra Pradesh.

(*b*) if so, the quantum of Electricity that they have agreed to supply to each of the above States together with the sources from which the Electricity would be supplied ;

(*c*) whether any prior condition to share the electricity produced here with other States has been imposed by any of the organisations while financing Sharavathi Project ;

(*d*) on what conditions and at what rate they have agreed to supply electricity to the neighbouring States ?

A.—Sri VEERENDRA PATIL (Minister for Public Works and Power).—

(*a*) Yes.

(*b*) About 500 Million Kilowatt hours in all from the 50 cy. Power system of Mysore tapped at the Peenya Receiving Station, Bangalore and transmitted on the 220 K.V. Peenya-Singarpet line.

(*c*) No.

(*d*) The conditions and rate are being worked out.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ಪ್ರಶ್ನೆಗೆ ಉತ್ತರವಾಗಿ ಷರತ್ತುಗಳನ್ನು ಹಾಗೂ ದರವನ್ನು ಸಿದ್ಧಗೊಳಿಸಲಾಗುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಷರತ್ತುಗಳನ್ನು ಮತ್ತು ದರವನ್ನು ಸಿದ್ಧಗೊಳಿಸುವುದಕ್ಕೆ ಮುಂಚೆ 50 ಸಾವಿರ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಆ ರಾಜ್ಯದವರಿಗೆ ಕೊಡುತ್ತೇವೆಂದು ಒಪ್ಪಿಕೊಳ್ಳುವುದಕ್ಕೆ ಇದ್ದಂತಹ ಒತ್ತಾಯವೇನು ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರಿಗೂ ದೊರೆತಿರುವ ಹಾಗೆ ಈ ಸಲ ಮಾನ್‌ಸೂನ್ ಫೇಲ್ ಆಗಿರುವುದರಿಂದ ಅನೇಕ ಕಡೆ ಹೈಡಲ್ ಸ್ಕೀಮ್ಸ್ ನಡೆಯುತ್ತಾ ಇಲ್ಲ. ಆದ್ದರಿಂದ ಆ ರಾಜ್ಯದವರಿಗೆ ಪವರ್ ಷಾರ್ಟ್ ಆಗಿದೆ. ನಾವು ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಒಪ್ಪಿಕೊಂಡಿರುವುದು ಡಿಸೆಂಬರ್ ತಿಂಗಳಿನಿಂದ ಬೆಂಗಳೂರಿನಲ್ಲಿರುವ ಸಿಂಗಾರಪೇಟೆ ಲೈನು ಆಗಬೇಕಾದರೆ ಇನ್ನೂ ಎರಡು ತಿಂಗಳಾಗುತ್ತದೆ. ಅಷ್ಟರಲ್ಲಿ ಅವು ಆದರೆ ದಕ್ಷಿಣ ಭಾರತದ ವಿದ್ಯುಜ್ಜಾಲ ರಚನೆಯ ತತ್ವಕ್ಕನುಸಾರವಾಗಿ ಅವರಿಗೆ ಪವರನ್ನು ಕೊಡುವುದಕ್ಕೆ ಸಾಧ್ಯವಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ನೆರೆರಾಜ್ಯಗಳು ನಮ್ಮ ರಾಜ್ಯದಿಂದ ಪವರನ್ನು ಪಡೆದು ಕೊಳ್ಳಬೇಕೆಂದು ಆತಿಸುವಾಗ ನಿಮ್ಮ ಷರತ್ತು ಮತ್ತು ದರಗಳಿಗೆ ಅವರು ಒಪ್ಪದೆ ಇದ್ದರೆ ಸರ್ಕಾರದವರು ಏನು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಸಂಬಂಧಪಟ್ಟ ಪ್ರಿನ್ಸಿಪಲ್‌ಗಳು ತಯಾರಾಗುತ್ತಿವೆ. ಅದನ್ನು ಮಾಡುವುದಕ್ಕಾಗಿ ''ವೆಂಕಟರಾಮನ್ ಕಮಿಟಿ'' ಎಂದು ಒಂದು ಕಮಿಟಿಯನ್ನು ನೇಮಕ ಮಾಡಿದೆ. 11 ಪರ್ಸೆಂಟ್ ಆನ್ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಬರಬೇಕೆಂದು ಅವರಿಗೆ ಹೇಳಿದ್ದೇವೆ. ಪ್ರಿನ್ಸಿಪಲ್‌ಗಳು ವರ್ಕ್‌ಔಟ್ ಆಗುತ್ತಿವೆ. ಎಷ್ಟು ಬರುತ್ತದೆಯೋ ಅಷ್ಟನ್ನು ಕೊಡುವುದಕ್ಕೆ ಅವರು ತಯಾರಾಗಿದ್ದಾರೆ. ಆ ಕಮಿಟಿಯಲ್ಲಿ ಪ್ಲಾನಿಂಗ್ ಕಮಿಷನ್‌ನ ಸದಸ್ಯರು ಇದ್ದಾರೆ. ಮತ್ತು ಮದ್ರಾಸ್ ರಾಜ್ಯದ ರೆಪ್ರೆಜೆಂಟೇಟಿವ್ ಇದ್ದಾರೆ. ಅವರು ಡೇಟಾ ವರ್ಕ್‌ಔಟ್ ಮಾಡುತ್ತಿದ್ದಾರೆ. ಅವರು ಏನು ದರವನ್ನು ಗೊತ್ತು ಮಾಡುತ್ತಾರೆಯೋ ಅದರ ಪ್ರಕಾರ ಆ ರಾಜ್ಯದವರು ಕೊಡುವುದಕ್ಕೆ ಒಪ್ಪುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ರಾಜ್ಯದಿಂದ ಮದ್ರಾಸ್ ರಾಜ್ಯಕ್ಕೆ ಪವರ್ ಸಾಗಿಸುವುದಕ್ಕೆ ಈಗ ಪವರ್ ಲೈನ್ ಹಾಕಬೇಕಾಗಿದೆ. ಆದ್ದರಿಂದ ನಾವು ಹಾಕತಕ್ಕ ಪವರ್ ಲೈನಿಗೆ ಆಗತಕ್ಕ ಖರ್ಚಿನಲ್ಲಿ ಅರ್ಧ ಭಾಗವನ್ನೇನಾದರೂ ಅವರು ಕೊಡಬೇಕೆಂದು ಮೈಸೂರು ಸರ್ಕಾರದವರು ಒಂದು ಷರತ್ತನ್ನೇನಾದರೂ ಹಾಕಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಗ್ರಿಡ್ ಬಂದನಂತರ ಅದರ ತತ್ವಕ್ಕನುಸರಿಸಿ ಸ್ಟೇಟ್ ಟ್ರಾನ್ಸ್‌ಮಿಷನ್ ಲೈನನ್ನು ನಮ್ಮ ಭಾಗದಲ್ಲಿ ಹಾಕುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಆದ್ದರಿಂದ ನಮ್ಮ ಭಾಗದಲ್ಲಿ ಹಾಕತಕ್ಕಂಥ ಲೈನಿನ ಖರ್ಚನ್ನು ನಾವು ಕೊಡಬೇಕಾಗುತ್ತದೆ. ಅವರ ಭಾಗದಲ್ಲಿ ಏನು ಖರ್ಚು ಬರುತ್ತದೆಯೋ ಅದನ್ನು ಆ ಸ್ಟೇಟಿನವರು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ನಮ್ಮ ರಾಜ್ಯದಲ್ಲಿ ಪವರ್ ಹೆಚ್ಚಾಗಿರುವುದರಿಂದ ಏನಾದರೂ ಈ ಮೂರು ರಾಜ್ಯಗಳಿಗೆ ಪವರನ್ನು ಕೊಡುತ್ತಿದ್ದೀರಾ ? ಅಥವಾ ಕೇಂದ್ರ ಸರ್ಕಾರದಿಂದ ಇದಕ್ಕೇನಾದರೂ ಆದೇಶ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಪವರ್ ಹೆಚ್ಚಾಗಿದೆ, ವ್ಯರ್ಥವಾಗುತ್ತಿದೆ ಆದಕ್ಕೋಸ್ಕರ ಅವರಿಗೆ ನಾವು ಪವರ್ ಕೊಡುತ್ತೇವೆಂದು ತಿಳಿಸಿಲ್ಲ. ಆ ರಾಜ್ಯಗಳವರಿಗೆ ವಿದ್ಯುಚ್ಛಕ್ತಿ ಇಲ್ಲದೆ ತೊಂದರೆಯಾಗಿ ಅವರು ಕಷ್ಟದಲ್ಲಿರುವುದರಿಂದ ಅವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ನಾವು ಅವರಿಗೆ ಪವರ್ ಕೊಡುತ್ತಿದ್ದೇವೆ.

2 P.M.

ಒಂದು ರಾಂಗ್ ಇಂಪ್ರೆಷನ್ ಇದೆ: ಶರಾವತಿ ಪವರನ್ನು ಉಪಯೋಗ ಮಾಡಿಕೊಳ್ಳಲಿಕೆ ಶಕ್ತಿ ಇಲ್ಲ, ಅದು ವೇಸ್ಟ್ ಆಗುತ್ತದೆ ಎಂದು. ಅದು ಇಲ್ಲ.

It is designed in such a way that each unit will have a generation capacity of 89.1 Mega Watts of power taking 60 per cent load factor into consideration. Instead of taking 60 per cent load factor we are putting more load on the unit and we are generating 100 Mega Watts on 90 per cent load factor. We are generating more by putting more load on these units, and we have agreed to give.

Mr. SPEAKER.—Is it permanently or temporarily ?

Sri VEERENDRA PATIL.—Only for 6 months.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಶರಾವತಿಯಿಂದ ಹೆಚ್ಚು ಉತ್ಪತ್ತಿಯಾಗುವಂಥ ವಿದ್ಯುಚ್ಛಕ್ತಿಯನ್ನು ಹೊರದೇಶಗಳಿಗೆ ಕೊಡಬೇಕೆಂಬುದೇ ಮುಖ್ಯ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಹೊರದೇಶದವರು ನಮ್ಮ ಎಲೆಕ್ಟ್ರಿಸಿಟಿಯನ್ನು ತೆಗೆದುಕೊಳ್ಳುತ್ತಾರೆ; ಆ ಕಾಲದಲ್ಲಿ ಈ ಗ್ರಿಡ್ ಮೇನ್ ಲೈನಿನ ಪವರು ಅವರಿಗೆ ಬರುತ್ತದೆ. ಆದ್ದರಿಂದ ಅವರದೇ ಅದರ ಸಂಪೂರ್ಣ ಖರ್ಚಿನ ಹೊಣೆಗಾರಿಕೆ ಇರಬೇಕು. ಹೊರಗಿನವರಿಗೆ ಅದರ ಉಪಯೋಗವಾಗುವಾಗ, ಮೈಸೂರಿನವರು ಆ ಭಾಗದ ಖರ್ಚನ್ನು ಹೊತ್ತುಕೊಳ್ಳುವುದಕ್ಕೆ ಏನು ಮುಖ್ಯ ಕಾರಣ ? ಅವಕ್ಕೆ ನಮ್ಮ ತಗಾದೆ ಇಲ್ಲ; ತಗಾದೆ ಇರುವುದು ಹೊರ ದೇಶದವರಿಂದ. ಬೇರೆಯವರಿಗಾಗಿ ಬರುವ ಲೈನಿನ ಖರ್ಚನ್ನು ಅವರೇ ವಹಿಸಿಕೊಳ್ಳಬೇಕು. ನೀವು ಅದಕ್ಕೆ ಏಕೆ ಬಂಡವಾಳ ಹಾಕುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮೈಸೂರು ದೇಶ, ಹೊರದೇಶವೆಂದರೆ ಅವರಿಗೇ ಗೊತ್ತಾಗಬೇಕು. ಮೈಸೂರು ಭಾರತ ದೇಶದಲ್ಲಿ ಒಂದು ರಾಜ್ಯ; ಹಾಗೆಯೆ ಬಾಕಿ ರಾಜ್ಯಗಳೂ. ಇದಕ್ಕೆ ಒಂದು ಅಂತರರಾಜ್ಯ (ಇಂಟರ್ ಸ್ಟೇಟ್) ಒಪ್ಪಂದವಿದೆ: ಎಲ್ಲಿ ಸರ್‌ಪ್ಲಸ್ ಪವರ್ ಇದೆಯೊ, ಅಲ್ಲಿನವರು ಷಾರ್ಜೇಜ್ ಇರುವ ಕಡೆಗೆ ಕೊಡಬೇಕೆಂದು. ಪವರ್‌ವೇಸ್ಟ್ ಆಗಬಾರದು ಅನ್ನುವುದೇ ಗ್ರಿಡ್ ಸಿಸ್ಟಂ ಬರುವ ಉದ್ದೇಶ. ನಮ್ಮ ಹತ್ತಿರ ಪವರ್ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡುವುದು ನಾವು ನಮ್ಮನೆ ಮುಫತ್ತಾಗಿ ಪವರನ್ನು ದಾನ ಮಾಡುವುದಿಲ್ಲ; ಯಾವ ರೀತಿ ಎಷ್ಟು ರೇಟಿನಲ್ಲಿ ಇಂಡಸ್ಟ್ರಿಗಳಿಗೆ, ಮತ್ತೊಂದಕ್ಕೆ, ಮತ್ತೊಂದಕ್ಕೆ ಚಾರ್ಜ್ ಮಾಡುತ್ತೇವೆಯೋ, ಅದೇ ರೀತಿ ಬೇರೆ ರಾಜ್ಯಗಳವರಿಗೂ ಮಾಡುತ್ತೇವೆ. ಒಂದು ಪ್ರಿನ್ಸಿಪಲ್ ಮೇಲೆ ಚಾರ್ಜ್ ಮಾಡುತ್ತೇವೆ, ಪವರ್ ಮಾರಾಟ ಮಾಡುತ್ತೇವೆ. ಆದ್ದರಿಂದ ಅವರೇ ಟ್ರಾನ್ಸ್‌ಮಿಷನ್ ಹಾಕುವ ಲೈನ್ ಖರ್ಚನ್ನೂ ವಹಿಸಬೇಕು, ಅವರೇ ಹಾಕಬೇಕೆಂದರೆ, ಅನ್ಯಾಯವಾಗುತ್ತದೆ; ಆ ಪ್ರಿನ್ಸಿಪಲ್‌ನ್ನು ಯಾರೂ ಒಪ್ಪುವುದಿಲ್ಲ.

ಶ್ರೀ ಆರ್. ಎಸ್. ಪಾಟೀಲ.—ನಮ್ಮ ದೇಶದಲ್ಲಿ ಲಭ್ಯವಾಗತಕ್ಕಂಥ ಎಲ್ಲಾ ವಿದ್ಯುಚ್ಛಕ್ತಿಯನ್ನು ಬಳಸಿಕೊಂಡು, ನಮಗೆ ಬಳಸಿಕೊಳ್ಳಲು ಶಕ್ತಿ ಇಲ್ಲದ್ದನ್ನು ಎರಡನೆ ರಾಜ್ಯಗಳಿಗೆ ಕೊಡುವುದರಲ್ಲಿ ಏನೂ ತೊಂದರೆ ಇಲ್ಲ ಅಲ್ಲವೇ ?

Mr. SPEAKER.—He has already answered that.

ಶ್ರೀ ವಿ. ಎಂ. ದೇವ್.—ಇರುವ ವಿದ್ಯುಚ್ಛಕ್ತಿಯನ್ನು ಬೇರೆ ಸ್ಟೇಟುಗಳಿಗೆ ಕೊಡಲು ಒಪ್ಪಿಕೊಂಡುದರ ಫಲವಾಗಿ, ಈಗ ನಮಗೆ ಬರಬೇಕಾಗಿದ್ದ ಒಂದು ಸಾವಿರ ಕಿಲೊವಾಟ್ಟರ್ ಲೆಂಗ್ತ್ ವೈರ್ ಇಲ್ಲದೆ, ಹೆಚ್ಚು ಕಡಿಮೆ 200 ಕಿಲೊವಾಟ್ಟರ್ ಅಲೊಕೇಷನ್ನಿನಲ್ಲಿ ವ್ಯತ್ಯಾಸವಾಗಿರುವುದು

ನಿಮ್ಮ ಗಮನಕ್ಕೆ ಬಂದಿದೆಯೆ ? ನಿಮ್ಮ ಟ್ರಾನ್ಸ್‌ಮಿಷನ್ ಲೈನುಗಳಿಗೆ ಎಷ್ಟು ಆಲೊಕೇಟ್ ಆಗ ಬೇಕಾಗಿತ್ತೊ, ಅದು ನೆರೆರಾಜ್ಯಗಳಿಗೆ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರ ಪ್ರಶ್ನೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ಮೆಟೀರಿಯಲ್ಲುಗಳ ಸ್ಕೇರ್ಸಿಟಿ ಇರುವ ನಂದರ್ಭದಲ್ಲಿ, ನೀವು ಬೇರೆ ರಾಜ್ಯ ಗಳಿಗೆ ಉಪಕಾರ ಮಾಡಿದರೆ, ನಮ್ಮ ರಾಜ್ಯದಲ್ಲಿರತಕ್ಕ ರೈತರಿಗೆ ತೊಂದರೆ ಬರುವುದಿಲ್ಲವೇ ? ಎಂದು ಕೇಳುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—220 ಕೆ. ವಿ. ಟ್ರಾನ್ಸ್‌ಮಿಷನ್ ಲೈನನ್ನು ಇವತ್ತು ಪ್ರಾರಂಭ ಮಾಡಿದ್ದೆಲ್ಲ; ಮದ್ರಾಸಿನವರಿಗೆ 50 ಸಾವಿರ ಕಿಲೋವ್ಯಾಟ್ ಕೊಡುತ್ತೇವೆ ಎಂದು ಹೇಳುವುದಕ್ಕೆ ಮೊದಲೆ. ಶರಾವತಿ ಯೂನಿಟ್ಟಿನಿಂದ ಪವರ್ ಷಾರ್ಟೇಜ್ ಬಹಳ ಇದೆ ಎಂದು ಪುರು ಮಾಡಿದ್ದೆವು. 220 ಕೆ.ವಿ. ಲೈನಿನ ಎಲ್ಲಾ ಕೆಲಸ ಮುಗಿಸಿವೆ; ಬಹುಶಃ ನವೆಂಬರ್ ಕೊನೆಯಲ್ಲಿ ಟ್ರಾನ್ಸ್‌ಮಿಷನ್ ಲೈನ್ ಕಂಪ್ಲೀಟ್ ಆಗುತ್ತದೆ. ಅದನ್ನು ಒಂದೂವರೆ ವರ್ಷದ ಕೆಳಗೇ ಪ್ರಾರಂಭ ಮಾಡಿದ್ದೆವು; ಇನ್ನು 2 ತಿಂಗಳಲ್ಲಿ ಮುಗಿಯುತ್ತದೆ. ಫ್ಲೇಯವೇನೆಂದರೆ, ನಮ್ಮಲ್ಲಿ ಪವರ್ ಹೆಚ್ಚಾಗಿದ್ದರೆ ನೆರೆ ರಾಜ್ಯದವರಿಗೆ ಕೊಡುವುದು, ಅವರಲ್ಲಿ ಹೆಚ್ಚಾಗಿದ್ದರೆ ನಾವು ತೆಗೆದುಕೊಳ್ಳುವುದು.

ಶ್ರೀ ವಿ. ಎಂ. ದೇವ್.—ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಅವರಿಗೆ ಅರ್ಥವಾದಮಟ್ಟಿಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರಿಗೆ ಕೊಡುವ ವಿದ್ಯುಚ್ಛಕ್ತಿಯಿಂದ, ಅಲ್ಲಿ ಬೆಳೆಯತಕ್ಕ ಅಕ್ಕಿ ರಾಗಿ ನಮಗೆ ಬರುವುದಿಲ್ಲ. ನಮ್ಮ ದೇಶಕ್ಕೆ ಅಕ್ಕಿ ರಾಗಿ ಅವರು ಕೊಡಲಿಲ್ಲ. ಆದ್ದರಿಂದ ಅವರು ಪವರ್ ಕನ್‌ಸಂಷನ್ನಿಗೆ ನಮಗೆ ದುಡ್ಡು ಕೊಡುವ ಬದಲು, ದಿನಸಿ ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪವರ್ ಕೊಟ್ಟು ರಾಗಿ, ಅಕ್ಕಿ ಕೇಳಬೇಕು ಅನ್ನುವ ವಿಚಾರ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ರಕ್ಷಣಾ ಕೆಲಸಕಾರ್ಯಗಳಿಗೆ ತೊಂದರೆ ಬರಬಾರದು ಅನ್ನತಕ್ಕಂಥ ದೃಷ್ಟಿಯಿಂದ, ನಮ್ಮ ರಾಜ್ಯದ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಒಪ್ಪಿರುವುದು ಒಂದು ಕಾರಣ ವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದೂ ಒಂದು ಇವೆ. ಇವತ್ತು ನೀವು ನೋಡಿದಹಾಗೆ ಎಲ್ಲ ರಿನರ್ವಾಯರುಗಳನ್ನೂ ಮಾಡುತ್ತಾ ಇದ್ದೇವೆ. ಲಿಂಗನಮಕ್ಕಿ ಹೈಡರ್ ಪ್ರಾಜೆಕ್ಟಿನಲ್ಲಿ 8 ಯೂನಿಟ್ ಕೆಪ್ಯಾಸಿಟಿ ನೀರು ಸ್ಟೋರು ಮಾಡುವುದಕ್ಕೆ ದೊಡ್ಡ ರಿನರ್ವಾಯರುಗಳನ್ನು ಕಟ್ಟಿದ್ದೇವೆ—ಎಕ್ಸ್‌ಟ್ರಾ ಲೋಡ್ ಹಾಕಿ, ಹೆಚ್ಚಿಗೆ ಪವರ್ ಜನರೇಟ್ ಮಾಡಬೇಕೆಂದು—ಡಿಫೆನ್ಸ್ ಆಫ್ ಇಂಡಿಯಾ ಉದ್ದೇಶ ದಿಂದ. ಆ ದೃಷ್ಟಿಯಿಂದಲೂ ಕೊಡುತ್ತಾ ಇದ್ದೇವೆ.

Sri G. V. GOWDA.—Is it not likely that when we commit once it becomes a committal ?

Sri VEERENDRA PATIL.—There is no question of committing one State to another. If the other State has surplus power, we are bound to get it and if our State has surplus, we are aggreeable to give. We cannot afford to waste power.

ಶ್ರೀ ಎಸ್. ಗೋಪಾಲ ಗೌಡ.—ಈಗ ವೆಂಕಟರಾಮನ್‌ರವರ ವರದಿ ದಕ್ಷಿಣದ ಒಂದು ವಿದ್ಯುತ್‌ಜಾಲವನ್ನು ರಚನೆ ಮಾಡಬೇಕು ಅನ್ನುವುದು ಎಂದು ಹೇಳಿದಿರಿ. ಈಗ ಈ ವಿದ್ಯುತ್‌ಜಾಲದ ರಚನೆ ಮಾಡುವುದರ ಬಗ್ಗೆ ಮಾತುಕತೆಗಳು ನಡೆದಿವೆ ಅನ್ನುವುದು ನಿಜವೇ ? ಹಾಗಿದ್ದಲ್ಲಿ ಪಕ್ಷದಲ್ಲಿ ಮೈಸೂರು ರಾಜ್ಯದವರು ಕಾಳಿನದಿ, ಬಾರಾಪೊಳೆ ಯೋಜನೆ ಮತ್ತು ವರಾಹಿ ಯೋಜನೆಯಿಂದ ಉತ್ಪತ್ತಿ ಮಾಡತಕ್ಕಂಥ ಎಲ್ಲಾ ವಿದ್ಯುಚ್ಛಕ್ತಿಯನ್ನೂ ಬಳಸಿಕೊಳ್ಳುವುದರ ಬಗ್ಗೆ ಸರಕಾರದವರು ಏನಾದರೂ ಒಂದು ಯೋಜನೆಯನ್ನು ಸಿದ್ಧಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ವೆಂಕಟರಾಮನ್ ಕಮಿಟಿಗೂ ಈ ಗ್ರಿಡ್ಡಿಗೂ ಏನೂ ಸಂಬಂಧ ವಿಲ್ಲ. ಗ್ರಿಡ್ ಆಗಬೇಕೆಂದು ಇಂಡಿಯಾದಲ್ಲಿ ಎಲ್ಲಾ ಸ್ಟೇಜಿನವರೂ ಒಪ್ಪಿದ್ದಾರೆ. ಸದರನ್ ಸ್ಟೇಟು ಗಳಾದ 4 ಸ್ಟೇಟುಗಳವರು ಗ್ರಿಡ್ ಬರಬೇಕೆಂದು ಒಪ್ಪಿಕೊಂಡಿದ್ದಾರೆ. ಗ್ರಿಡ್ ಮಾಡುವ ಮುಖ್ಯ ಉದ್ದೇಶ, ಪವರ್ ವೇಸ್ಟ್ ಆಗಬಾರದೆನ್ನುವುದು ; ಮ್ಯಾಕ್ಸಿಮಮ್ ಪವರ್ ಯೂಟಿಲೈಸೇಷನ್ ಆಗ

(ಶ್ರೀ ವೀರೇಂದ್ರ ಪಾಟೀಲ್)

ಬೇಕೆಂದು. ನಾವು ಇದನ್ನೆರ್ಲಾ ಸ್ಪಷ್ಟ ಮಾಡಿದ್ದೇವೆ. ಮುಂದೆ ಬರುವವರಿಗೂ ಸ್ಕೀಮುಗಳನ್ನು ತಯಾರುಮಾಡಿಕೊಂಡಿದ್ದಾರೆ. 500 ಮೆಗಾ ವ್ಯಾಟ್ ರಚಿನತಕ್ಕಂಥ ಪವರಿಗೂ ನಮ್ಮ ಎರೆಕ್ಟ್ರಿಸಿಟಿ ಬೋರ್ಡಿನ ಹತ್ತಿರ various industriesಗೆ ಡಿಮ್ಯಾಂಡ್ ಇದೆ. ಅವ್ರರಿಂದ ಪವರ್ ವೇಸ್ಟ್ ಆಗುತ್ತದೆ ಅನ್ನುವ ಪ್ರಶ್ನೆಯೇ ಇಲ್ಲ. ಮುಂದೆ ಪ್ರಾಜೆಕ್ಟುಗಳನ್ನು ಮಾಡಬಹುದು ಎಂದು ಅದನ್ನು ಉಪಯೋಗ ಮಾಡಲು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ.

Mr. SPEAKER.—Question hour is over. Before we proceed further, I trust we are sitting only for to-morrow. I have got two lists of Question, *viz.*, 8th and 9th. I will put both of them for to-morrow and we may try to finish as much as we can and the rest are likely to lapse. I wanted to inform the House about it so that the Hon'ble Members may not be taken by surprise.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ.)—ಸ್ವಾಮಿ, ಇವೊತ್ತು ರಾಷ್ಟ್ರೀಯ ಐಕ್ಯತಾ ದಿನಾಚರಣೆ ಎಂದು ಎಲ್ಲ ಕಡೆಗಳಲ್ಲಿಯೂ ಆಚರಣೆ ನಡೆಸುತ್ತಾ ಬಂದಿದ್ದಾರೆ. ಅದರಂತೆ ಈ ಮಾನ್ಯ ಸಭೆಯಲ್ಲಿಯೂ ಕೂಡ ತಾವೇ ಒಂದು ನೂಡನೆ ತಂದು ಇಲ್ಲೆ ಮಾಡಬಹುದು. ಇದರ ಬಗ್ಗೆ ತಾವು ಇಲ್ಲಿ ಗಮನ ಕೊಡಬೇಕೆಂದು ನಲಹೆ ಪಾಡುತ್ತೇನೆ.

Mr. SPEAKER.—I will consider that. I have taken it along with the Members of my staff. If the House wants to take, I have no objection. It is for the Leader of the House and the Leader of the Opposition to meet and decide and tell me. I will consider and deal with it at 3 O' clock.

I take it that the House is adjourning to-morrow. It means that we have got only 3½ hours today and 3½ hours tomorrow. Will any of the Hon'ble Ministers tell me how the work should be arranged because there are a number of Bills and 7 hours are not sufficient for the consideration of all these Bills.

Sri RAMAKRISHNA HEGDE (Minister for Finance).—I hope the Chair will try to adhere to the time limit and I hope the Hon'ble Members on the other side also will kindly co-operate.

Mr. SPEAKER.—Now we will take up the discussion of the Supplementary Estimates.

ಶ್ರೀ ಎಸ್. ಗೋಪಾಲ ಗೌಡ.—ತಾವು ಇಲ್ಲಿ ಯಾವ ರೀತಿಯಾಗಿ ಅಜೆಂಡಾವನ್ನು ಅನುಸರಿಸುತ್ತೀರಿ ಎನ್ನುವುದೇ ನಮಗೆ ಸರಿಯಾಗಿ ಗೊತ್ತಾಗುವುದಿಲ್ಲ. ಇದರಿಂದ ಯಾವ ರೀತಿ ಅನುಸರಿಸ ಬೇಕು ಎನ್ನುವುದೇ ಸ್ವಲ್ಪ ಕಷ್ಟವಾಗಿದೆ. ಅಲ್ಲದೆ ತಾವೇ ಈಗಾಗಲೇ ಹೇಳಿದಂತೆ ಈ ಸಭೆಯು ಅಧಿವೇಶನ 21ನೇ ತಾರೀಖು ಮುಗಿದು ಹೋಗುತ್ತದೆ ಎಂದು ಹೇಳುತ್ತಿದ್ದೀರಿ. ಅಲ್ಲದೆ ನಮ್ಮ ಮುಂದೆ ಎಷ್ಟೋ ಮಸೂದೆಗಳು ಬಂದಿದ್ದರೂ ಅವೆಲ್ಲವೂ ಕೂಡ ಹಾಗೇ ಉಳಿದು ಹೋಗುತ್ತವೆ. ಹಿಂದೆ ಕೂಡ ಇಲ್ಲಿ ಬಂದಿದ್ದ ಮೈಸೂರು ರಾಜ್ಯದ ಪಂಚಾಯತಿ ಮಸೂದೆ ಕೂಡ ಹಾಗೆ ಇದೆ.

CALLING ATTENTION MOTION *re*: HARDSHIPS CAUSED TO THE LABOURERS OF K. R. MILLS, MYSORE.

Mr. SPEAKER.—The Hon'ble Member has sent a Calling Attention Notice also. Is he dealing with it or shall I take it that it is over ?